ಆ) ನಗರದ ಮಧ್ಯೆ ಹರಿಯುವ ಈ ನಾಲಾದ ಎರಡು ಬದಿಗೆ ಇರುವ ಗೋಡೆಗಳನ್ನು ದುರಸ್ತಿ ಮಾಡಿಸಲು ರೂ. ೧.೫೦ ಲಕ್ಷ ಅಂದಾಜು ವೆಚ್ಚದಿಂದ ಕೈಗೊಳ್ಳಲಾಗಿದೆ. ಇದಲ್ಲದೆ ರೂ. ೧೦೭ ಲಕ್ಷ ಅಂದಾಜು ವೆಚ್ಚದಿಂದ ೪೦ ಕಿ.ಮೀ. ಉದ್ದದ ನಾಲಾಗೋಡೆಗಳನ್ನು ಕಟ್ಟುವ ಯೋಜನೆ ತಯಾರಿಸಿದ್ದು, ಹಂತ ಹಂತವಾಗಿ ಇದನ್ನು ಕೈಗೊಳ್ಳಲಾಗುವುದು. ಈ ಯೋಜನೆಗಳಿಂದ ಮಳೆಗಾಲದಲ್ಲಿ ತುಂಬಿ ಹರಿಯುವ ನಾಲಾದಿಂದ ಆಗುವ ಹಾನಿ ತಪ್ಪುತ್ತದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಮಾನ್ಯ ಅಧ್ಯಕ್ಷರೇ, ೧.೫೦ ಲಕ್ಷ ರೂಪಾಯಿ ವೆಚ್ಚದಿಂದ ಗೋಡೆಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇನ್ನೂ ಪ್ರಾರಂಭವಾಗಿಲ್ಲ. ಬಹುಶಃ ಇದನ್ನು ಪ್ರಾರಂಭ ಮಾಡುತ್ತೀರಿ ಎಂಬ ಭರವಸೆ ನನಗೆ ಉಂಟು. ಅದರಂತೆ ಮಾಡುತ್ತೀರಾ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಆದಷ್ಟು ಬೇಗನೆ ಈ ಕಾರ್ಯಪನ್ನು ಕಾರ್ಯಗತ ಮಾಡಲಾಗುವುದು.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಮಳೆಯಿಂದ ತೀವ್ರವಾಗಿ ಹಾನಿಗೆ ಒಳಗಾಗಿರುವಂತಹ ಕೆಲವು ಪ್ರದೇಶಗಳು ಇವೆ. ನೀವು ಮಂಜೂರು ಮಾಡಿರುವಂತಹ ೧.೫೦ ಲಕ್ಷ ರೂಪಾಯಿಗಳ ಹಣ ಸಾಲದು. ತೀವ್ರವಾಗಿ ಹಾನಿಗೊಳಗಾದಂಥ ಪ್ರದೇಶಗಳಿಗೆ ಎಷ್ಟೇ ಹಣ ಖರ್ಚು ಬಿದ್ದರೂ ಅದನ್ನು ಮಂಜೂರು ಮಾಡುವುದಕ್ಕೆ ನೀವು ಒಪ್ಪುತ್ತೀರಾ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ೨೫-೫-೧೯೭೦ ರಂದು ಧಾರವಾಡದಲ್ಲಿ ಭಾರೀ ಮಳೆಯಿಂದ ತಗ್ಗು ಪ್ರದೇಶಗಳಾದ ಹಾವೇರಿಪೇಟೆ, ಕಾಂತಿಗಲ್ಲಿ, ಜಾವೂಸ್ ಪೇಟೆ, ಮದಾರ್‌ಸಾಬ್ ಪೇಟೆ, ಬಾಲಾಜಿ ಮಠ ಮುಂತಾದ ಕೆಲವು ಪ್ರದೇಶ ಗಳಲ್ಲಿ ಬಹಳಷ್ಟು ತೊಂದರೆಯಾಗಿದ್ದು ೧೪೮ ಕುಟುಂಬಗಳು ತೊಂದರೆಗೊಳಗಾಗಿವೆ ಎಂದು ಸಮೀಕ್ಷೆಯಲ್ಲಿ ಗುರುತಿಸಲಾಗಿದೆ. ಈಗಾಗಲೇ ಸಂತ್ರಸ್ತರ ಕುಟುಂಬಗಳಿಗೆ ೪೯,೦೭೦ ರೂಪಾಯಿಗಳ ಪರಿಹಾರ ಕೊಡಲಾಗಿದೆ. ಮಳೆ ಬಿದ್ದ ಕೆಲವು ತಗ್ಗು ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ಕೆಲವು ಸೌಕರ್ಯಗಳನ್ನು ಕೊಡುವುದಕ್ಕೆ ನಮ್ಮ ನಗರಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ನಾನು ಹಾಕಿದ್ದ ಪ್ರಶ್ನೆ ಹುಬ್ಬಳ್ಳಿ ನಗರದ ಕರ್ಕಿ ಹಳಕ್ಕೆ ಸಂಬಂಧಪಟ್ಟಿದ್ದು. ಇದರ ಬಗ್ಗೆ ಇನ್ನೂ ಏನು ಆಗಲಿಲ್ಲ. ತೀವ್ರವಾಗಿ ಹಾನಿಗೆ ಒಳಗಾದ ಈ ಪ್ರದೇಶ ಗಳಲ್ಲಿ ಗೋಡೆ ಕಟ್ಟುವುದಕ್ಕೆ irrespective of sanction of money, are you going to give money for that ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಂಬಂಧಪಟ್ಟ ಇಲಾಖೆಗೆ ಕೂಡಲೇ ಆದೇಶಕೊಡ ಲಾಗುವುದು.

ಸಂಜಯಗಾಂಧಿ ನಗರದ ಕೊಳಚೆ ಪ್ರದೇಶಕ್ಕೆ ಸಂಬಂಧಿಸಿದ ಜವೀನಿನ ಒತ್ತುವರಿ.

೧೩೩೧. ಶ್ರೀ ಶಿವಣ್ಣಮೇಗೌಡ (ನಾಗಮಂಗಲ).—ಮಾನ್ಯ ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಸೇರಿದ ಪೀಣ್ಯ ಹಿನೇ ಹಂತದಲ್ಲಿನ ಸಂಜಯಗಾಂಧಿನಗರ ಕೊಳಚೆ ಪ್ರದೇಶದಲ್ಲಿ (ಲಕ್ಷ್ಮೀದೇವಿನಗರ) ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಇನ್‌ಸ್ಟ್ರುಮೆಂಟ್ ಕಾರ್ಖಾನೆಯ ಮಾಲೀಕರ ಮನೆಯವರು ಒತ್ತುವರಿ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿಯವರು ಕಟ್ಟಡದ ನಕ್ಷೆಗೆ ಒಪ್ಪಿಗೆಯನ್ನು ಪಡೆಯದೇ ಕಟ್ಟಡವನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರ ಬಗ್ಗೆ ಕೈಗೊಳ್ಳುವ ಮುಂದಿನ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.

ಇ) ಅನಧಿಕೃತವಾಗಿ ಅತಿಕ್ರಮಿಸಿರುವ ವಾಲೀಕರಿಬ್ಬರಲ್ಲಿ ಒಬ್ಬರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಂ. ಳ೦೦೫೬/೮೨ ಹಾಕಿ ತಡೆಯಾಜ್ಞೆಯನ್ನು ತೆರುವು ಮಾಡುವ ವಿರುದ್ಧ ದಿನಾಂಕ ೨೩-೧೧-೮೫ ರಂತೆ ಪಡೆದಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಸದರಿ ವಿಷಯದಲ್ಲಿ ವಿಚಾರಣೆಯನ್ನು ಶೀಘ್ರದಲ್ಲಿ ಮಾಡಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಸೂಚಿಸಲಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನನ್ನ ಮೊದಲನೆಯ ಹಾಗೂ ಎರಡನೆಯ ಪ್ರಶ್ನೆಗಳಿಗೆ ಹೌದು ಮತ್ತು ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಮೂರನೆಯ ಪ್ರಶ್ನೆಗೆ ೨೩-೮೫ರಲ್ಲಿ ಅವರು ತಡೆಯಾಜ್ಞೆ ತಂದಿದ್ದಾರೆ ಎಂದು ಹೇಳಿದ್ದಾರೆ. ಅನ್ ಅಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುತ್ತಿರುವಂತಹ ಇಬ್ಬರಲ್ಲಿ ಒಬ್ಬರು ತಡೆಯಾಜ್ಞೆ ತಂದಿದ್ದಾರೆ ಎಂದು ಹೇಳಿದ್ದಾರೆ. ೨೩-೮೫ರಲ್ಲಿ ತಡೆಯಾಜ್ಞೆ ತಂದಿದ್ದಾರೆ. ಇಲ್ಲಿಗೆ ಐದು ವರ್ಷ ಮುಗಿಯುತ್ತಾ ಬಂತು. ಗುಂಡೂರಾಯರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಬೆಂಗಳೂರಿನಲ್ಲಿರತಕ್ಕಂಥ ಎಲ್ಲಾ ಸ್ಲಮ್‌ನವರಿಗೆ, ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿ ವಸತಿ ಸೌಲಭ್ಯ ಮಾಡಿಕೊಡುತ್ತೇವೆಂದು ಹೇಳಿ, ಅವರನ್ನೆಲ್ಲಾ ಈ ಜಾಗದಲ್ಲಿ ತೆಗೆದು ಕೊಂಡು ಹೋಗಿ ಹಾಕಿದ್ದರು. ಈ ಜಾಗದ ಪಕ್ಕದಲ್ಲಿರುವ ಪ್ರಾಕ್ಟರಿ ವಾಲೀಕರು ಅನ್ ಅಥರೈಸ್ಡ್ ಆಗಿ, ಬಿ.ಡಿ.ಎ. ಯಿಂದಾಗಲೀ, ಸರಕಾರದ ಯಾವುದೇ ಒಂದು ಇಲಾಖೆಯಿಂದಾಗಲೀ ಅನುಮತಿ ಪಡೆಯದೇ, ಅನ್‌ಅಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುತ್ತಿದ್ದಾರೆ. ೧೯೮೫ರಲ್ಲಿ ಅವರು ಕಟ್ಟಿಡ ಕಟ್ಟಿದ್ದರೂ ಸರಕಾರ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ, ಏಕಕ್ಕೆ ತೆಗೆದುಕೊಂಡಿಲ್ಲ. ತೆಗೆಕೊಳ್ಳದಿರುವುದಕ್ಕೆ ಅಧಿಕಾರಿಗಳೇನಾದರೂ ಶಾಮೀಲಾಗಿದ್ದಾರೆಯೇ ಎಂಬುದನ್ನು ತಿಳಿಸಬೇಕು. ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನೂ ತಿಳಿಸಬೇಕು.

ಶ್ರೀ ಟಿ. ಎನ್ ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ಏನಿದೆ ಅದು ನನಗೂ ಅರ್ಥವಾಗುತ್ತಿದೆ. ಸಮಾಜದಲ್ಲಿ ನೊಂದ ವರ್ಗದವರಿಗಾಗಿ ಕೈಗೊಳ್ಳುವಂತಹ ಇಂತಹ ಕಾರ್ಯಕ್ರಮಗಳಲ್ಲಿ ಅಡ್ಡಿ ಆತಂಕಗಳು ಯಾವ ಹಂತದಲ್ಲೂ ಆಗಬಾರದು. ಇದು ನ್ಯಾಯಾಲಯದ ಮುಂದೆ ಹೋಗಿ ತಡೆಯಾಜ್ಞೆ ಆಗಿದೆ. ಅದನ್ನು ತೆರವು ಮಾಡುವುದರಲ್ಲಿ ನಾವು ಸ್ವಲ್ಪ ಮಂದಗತಿಯಲ್ಲಿ ಇದ್ದೇವೆ ಎಂಬ ವಾದ ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಂತಹ ಸಂದರ್ಭಗಳಲ್ಲಿ ಆದ್ಯತೆಯ ಮೇರೆಗೆ ತಡೆಯಾಜ್ಞೆಯನ್ನು ತೆರವು ಮಾಡಿಸಬೇಕೆಂದು ಆ ರೀತಿ ನಮ್ಮೋಭಾವವನ್ನು ಅರ್ಥಮಾಡಿಕೊಂಡು ಕ್ರಮಕೈಗೊಳ್ಳಬೇಕೆಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಈ ಬಗ್ಗೆ ಕೂಡಲೇ ಆದ್ಯತೆಯ ಮೇಲೆ ಕ್ರಮ ತೆಗೆದುಕೊಂಡು ತಡೆಯಾಜ್ಞೆಯನ್ನು ತೆರವು ಮಾಡಿಸ ಬೇಕೆಂದೂ ಸೂಚನೆ ಮಾಡಿರುತ್ತೇನೆ. ಈ ಸ್ಟೇ ಆರ್ಡರ್ ಏನಿದೆ ಅದನ್ನು ಆದ್ಯತೆ ಮೇಲೆ ತೆರವು ಮಾಡಿಸುವುದಕ್ಕೆ ಸರಕಾರ ಕ್ರಮ ಕೈಗೊಳ್ಳುತ್ತದೆಂದು ನಾನು ತಮ್ಮ ಮೂಲಕ ಭರವಸೆ ಕೊಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದು ೫ ವರ್ಷಗಳಾಗಿದೆ. ಅಧಿಕಾರಿಗಳು ಅವರ ಜೊತೆಯಲ್ಲಿ ಶಾಮೀಲಾಗಿರತಕ್ಕಂಥಾದ್ದು. ಒಂದು ಅಲ್ಲಿ ಅವರು ಎರಡು ಬಿಲ್ಡಿಂಗ್ ಕಟ್ಟುತ್ತಿದ್ದಾರೆ. ಅಲ್ಲಿರತಕ್ಕಂಥ ಹತ್ತಾರುಸಾವಿರ ಜನ ಪೆಡ್ಲ್‌ರ್‌ಗಳನ್ನು ಏನು ಹಾಕಿಕೊಂಡಿದ್ದಾರೆ ಅವರನ್ನು ಅಲ್ಲಿಂದ ಓಡಿಸುತ್ತಿದ್ದಾರೆ. ಅವರು ಬಿಲ್ಡಿಂಗ್ ಕಟ್ಟಿಕೊಳ್ಳುವುದಕ್ಕಾಗಿ ಇವರನ್ನೆಲ್ಲಾ ಓಡಿಸುತ್ತಿದ್ದಾರೆ. ಅವರ ಜೊತೆಗೆ ಬೇರೆಯವರೂ ಸಹ ಅಲ್ಲಿ ಬಿಲ್ಡಿಂಗ್ ಕಟ್ಟಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಒಟ್ಟಾರೆ ಯಾಗಿ ನೀವು ತೀರ್ಮಾನ ತೆಗೆದುಕೊಳ್ಳತಕ್ಕದ್ದು, ತಡೆಯಾಜ್ಞೆ ತೆರವು ಮಾಡಿಸತಕ್ಕದ್ದು ಡೆಮಾಲಿಷ್ ಮಾಡಿಸತಕ್ಕದ್ದು ಒಂದು ಕಡೆ ಇರಲಿ. ಈ ಬಗ್ಗೆ ಇದಂವರಿಗೂ ಏನೂ ಕ್ರಮ ತೆಗೆದುಕೊಳ್ಳದೇ ಇದ್ದಂಥ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ

೧೦೬೮. ಶ್ರೀ ಪುತ್ತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ —

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಹಿರಿಯ ಪ್ರಾಥಮಿಕ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).